“ಸಾಹುಕಾರ ಎಷ್ಟೇ ದುಡಿಸಿದರೂ ಆಕೆ ಮಾತೆತ್ತದೇ ದುಡಿಯುತ್ತಿದ್ದಳು. ಅವಳಿಗೂ ನಾನು ಆದಷ್ಟು ಬೇಗ ಸರಿ ಹೋಗಬಹುದು ಎನ್ನುವ ನಿರೀಕ್ಷೆಯೇ ಬಲ ತುಂಬುತ್ತಿತ್ತು. ಮಗು ಪಾಪ ಸಂಜೆಯಾಗುವುದನ್ನೇ ಕಾಯುತ್ತಿತ್ತು. ಅಮ್ಮನ ಸಾಮೀಪ್ಯ ಮತ್ತು ಎದೆ ಹಾಲಿಗಾಗಿ. ಆದರೆ, ಆಕೆ ಬರುವಾಗ ಯಾವಾಗಲೂ ಕತ್ತಲು ಆವರಿಸಿಕೊಳ್ಳುತ್ತಿತ್ತು. ಬಹಳಷ್ಟು ದಣಿದಿರುತ್ತಿದ್ದಳು. ಆವತ್ತೂ ಕತ್ತಲು ಪೂರ್ತಿಯಾಗಿ ಆವರಿಸಿದ್ದರೂ ಆಕೆ ಕಾಣಲಿಲ್ಲ. ಭಯವಾಗಿತ್ತು. ಮಗುವನ್ನು ಎತ್ತಿಕೊಂಡು ಅಂಗಳದ ಮುಳ್ಳಿನ ಬೇಲಿಯ ಬಳಿ ನಿಂತಿದ್ದೆ. ಕತ್ತಲಿನಲ್ಲಿ ಆಕೆ ಏದುಸಿರು ಬಿಡುತ್ತಾ ಬರುತ್ತಿದ್ದಳು. ನಾನೂ ಗಾಬರಿಗೊಂಡೆ. ತಲೆಯಲ್ಲಿ ಹುಲ್ಲಿನ ಹೊರೆ ಇರಲಿಲ್ಲ! ಅವಳ ಮುಖ ನನಗೆ ಸರಿಯಾಗಿ ಕಾಣಿಸುತ್ತಿರಲಿಲ್ಲ. ಎಂದಿನಂತೆ ಅವಳು ಮಗುವನ್ನು ಎತ್ತಿಕೊಳ್ಳಲಿಲ್ಲ. ನನಗೆ ಮುಖ ಕೂಡ ಕೊಡದೆ ಬಚ್ಚಲು ಮನೆಗೆ ಓಡಿದಳು. ಮನಸ್ಸಿನ ಮೂಲೆಯಲ್ಲಿ ಏನೋ ಸಂಶಯ! ಅವಳು ಹೊರಬಂದ ಕೂಡಲೇ ಅವಳು ಕಳಚಿಟ್ಟ ವಸ್ತ್ರಗಳನ್ನು ಒಂದೊಂದೇ ಪರಿಶೀಲಿಸಿದೆ. ಸೀರೆಯ ಸೆರಗು ಹರಿದಿತ್ತು.

ರವಿಕೆಯಲ್ಲೆಲ್ಲಾ ಪರಚಿದ ಕಾರಣಕ್ಕೆ ನೂಲು ದೂರಾದ ಗೆರೆಗಳು! ನಾನು ಬೆಚ್ಚಿಬಿದ್ದೆ. ಮನಸ್ಸು ಬೇಡದ್ದನ್ನೇ ಶಂಕಿಸುತ್ತಿತ್ತು. ತಿಂಗಳುಗಟ್ಟಲೆ ಮನೆಯಲ್ಲೇ ಇದ್ದೆ. ಮನಸ್ಸಿಗೆ ಲವಲವಿಕೆಯಿರಲಿಲ್ಲ. ಏನೋ ಆಗಬಾರದ್ದು ಸಂಭವಿಸಿದೆ ಎಂದು ಮನಸ್ಸು ಒತ್ತಿ ಒತ್ತಿ ಹೇಳುತ್ತಿತ್ತು. ಹಿಂದೆ ಅವಳಮ್ಮನ ಮಾತು ತೆಗೆದು ನನ್ನ ತಾಯಿ ಹಂಗಿಸುತ್ತಿದ್ದ ಮಾತುಗಳು ಮತ್ತೆ ಮತ್ತೆ ನೆನಪಾಗುತ್ತಿದ್ದವು. ಅವುಗಳಿಗೆ ಇವತ್ತು ಯಾಕೆ ರೆಕ್ಕೆ ಪುಕ್ಕ ಬಲಿತಿದೆ ಎಂದು ನನಗೇ ಅರ್ಥವಾಗುತ್ತಿರಲಿಲ್ಲ. ಅವಳು ಸಹಜವಾಗಿರುವ ಹಾಗೆ ನಡೆದುಕೊಳ್ಳುವುದಕ್ಕೆ ಹೆಣಗಾಡುತ್ತಿದ್ದಳು. ನನಗೆ ಸಹಜವಾಗಿರಲು

